ಶ್ರೀ ಸಿ. ಆರ್. ರಂಗೇಗೌಡ.—208 ಅರ್ಜಿಗಳ ಪೈಕಿ ನೀರಾವರಿ ಬಾವಿಗಳಿಗೆ ಕೊಟ್ಟಿರತಕ್ಕ ಬೇಡಿಕೆಯನ್ನು ಕೈ ಬಿಟ್ಟಿದ್ದೀರಿ. ನಮ್ಮ ತಾಲ್ಲೂಕಿನಲ್ಲಿ ಬೇಕಾದಷ್ಟು ನದಿಗಳು ಇದ್ದರೂ ಕೂಡ ಇರಿಗೇಷನ್‌ಗೆ ಅವಕಾಶವೇ ಇಲ್ಲ. ಆದ್ದರಿಂದ ನೀರಾವರಿ ಬಾವಿಗಳಿಗಾದರೂ ಹೆಚ್ಚಿನ ಅದ್ಯತೆ ಕೊಟ್ಟು ಆಹಾರದ ಅಭಾವವನ್ನು ನೀಗಿಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಲ್ಯಾಂಡ್ ಡೆವಲಪ್‌ಮೆಂಟಿನ ಬಗೆಗೆ ಅರ್ಜಿ ಒಂದೇ ಬಂದದ್ದು. ಮಾನ್ಯ ಸದಸ್ಯರು ಹೇಳುವ ಹಾಗೆ ಅಲ್ಲ ನೀರಾ ವರಿ ಬಾವಿಗಳಿಗೆ ಒಂದು ಹೆಚ್ಚಿನ ಒತ್ತಾಯ ಇದೆ. ಅದು ಸರ್ಕಾರದವರಿಗೆ ಮನವರಿಕೆಯಾಗಿದೆ ಈಗಾಗಲೆ ನೀರಾವರಿ ಬಾವಿಗಳಿಗೆ ಹೆಚ್ಚಿನ ಹಣ ಕೊಟ್ಟಿದ್ದೇವೆ. ಮೊನ್ನೆ ಸಹಕಾರ ಶಾಖೆಯ ಮಂತ್ರಿಗಳು ಹೇಳಿದ ಹಾಗೆ ಮುಂದಿನ ವರ್ಷ 5 ಸಾವಿರ ಬಾವಿಗಳಿಗೆ ಹಣ ಒದಗಿಸಬೇಕೆಂದು ಸರ್ಕಾರ ಇಚ್ಛೆ ಇದೆ. ಈಗಾಗಲೇ ಲ್ಯಾಂಡ್ ಬ್ಯಾಂಕಿನವರು ಸುಮಾರು 4 ಸಾವಿರ ಬಾವಿಗಳಿಗೆ ಹಣವನ್ನು ಏರೇವಾರಿ ಮಾಡಿದ್ದಾರೆ ಎನ್ನುವುದು ತಿಳಿದು ಬಂದಿದೆ. ಮುಂದಿನ ವರ್ಷ ಸಹ ಯಾವ ಹಣದ ಕೊರತೆ ಬರುವುದಿಲ್ಲ. ಮಾಗಡಿ ತಾಲ್ಲೂಕಿನವರು ಅನುಕೂಲ ಪಡೆದುಕೊಳ್ಳಬಹುದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಾವು ಸಂಚಾರ ಮಾಡುವ ದೃಷ್ಟಿ ತಾಲ್ಲೂಕಿನಲ್ಲಿ ತಮ್ಮ ನಮ ಕ್ಷಮ ಕೆಲಸಗಳನ್ನು ಪ್ರಾರಂಭ ಮಾಡಬೇಕೆಂದು ಇರುತ್ತದೆ. ಅಂತಹ ಸಂದರ್ಭದಲ್ಲಿ ಎಷ್ಟು ಕೆಲಸ ಗಳನ್ನು ಪ್ರಾರಂಭ ಮಾಡಿದ್ದೀರಿ, ಎಷ್ಟು ಅರ್ಜಿಗಳನ್ನು ಏರೇವಾರಿ ಮಾಡಿದ್ದೀರಿ ಮತ್ತು ಎಷ್ಟು ಅರ್ಜಿಗಳನ್ನು ಅಧಿಕಾರಿಗಳಿಗೆ ವರ್ಗಾಯಿಸಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ರಿಲೀಫ್ ಕಾಂಗಾರಿಗಳನ್ನು ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನು ಮಾಡಿಸುತ್ತಾರೆ ಇಲ್ಲದೇ ಹೋದರೆ ಪಿ. ಡಬ್ಲೂ. ಡಿ. ಇಲಾಖೆ ಅಥವಾ ಮತ್ತಾವುದಾದರೂ ಇಲಾಖೆ ಕೆಲಸಕಾರ್ಯಗಳು ಇದ್ದರೆ ಅವನ್ನು ಮಾಡಿಸುತ್ತೇವೆ.

ಶ್ರೀ ಟಿ. ಮಾದಯ್ಯಗೌಡ.—ಈ ಮೂರೂವರೆ ತಿಂಗಳಿನಲ್ಲಿ ಎಷ್ಟು ಮಟ್ಟಿಗೆ ಸಮರ್ಪಕವಾಗಿ ಕೆಲಸ ನಡೆದಿವೆ ಎಂಬುದನ್ನು ವಿಮರ್ಶೆ ಮಾಡಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಗೋ ಕಟ್ಟೆ, ಕೆರೆ ರಿಪೇರಿ ಕೆಲಸಗಳನ್ನೆಲ್ಲಾ ಮಾಡುತ್ತಾ ಇದ್ದಾರೆ. ಸೂಪರಿಂಟೆಂಡಿಂಗ್ ಇಂಜಿನಿಯರು ಕೊಟ್ಟಿರತಕ್ಕ 19 ಕೆಲಸ ಕಾರ್ಯಗಳು ಇವೆ, 4ಲಕ್ಷ 68 ಸಾವಿರ ರೂಪಾಯಿ ಅವಕ್ಕೆ ಮಂಜೂರಾತಿ ಕೊಟ್ಟಿದ್ದೇವೆ. ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿಗೆ ಪಂಪ್ ಸೆಟ್‌ಗಾಗಿ ಅರ್ಜಿಕೊಟ್ಟಿರುವುದು ಇವುಗಳೆಲ್ಲಾ ಒಂದು ಎರಡು ದಿವಸದಲ್ಲಿ ಆಗುವುದಿಲ್ಲ ಕೆಲವು ತಿಂಗಳಾದರೂ ಬೇಕಾಗುತ್ತದೆ. ಅವನ್ನು ಪರಿಶೀಲನೆ ಮಾಡಬೇಕು. ಆದ್ದರಿಂದ 208 ಅರ್ಜಿಗಳ ಬಗ್ಗೆ ನಂಪೂರ್ಣವಾಗಿ ಕೆಲಸ ಕಾರ್ಯಗಳು ಆಗಿವೆ ಎಂದು ಹೇಳಲಕ್ಕೆ ಬರುವುದಿಲ್ಲ.

Project Allowance to the Agricultural Staff.

*Q.—395 Sri G. N. PATIL (Talikot).—

Will the Government be pleased to state.—

(*a*) whether it is a fact that Government has sanctioned Project Allowance to the Agricultural staff working in the T. B. P. area;

(*b*) whether it is also a fact that Project Allowance to Agricultural staff working in the Bhadra and G. L. B. C. areas has not been sanctioned, though the other staff of the above areas were sanctioned the same;

(*c*) whether Government would extend this benefit to the agricultural staff of the Bhadra and G.L.B.C. areas ?

A.—Sri H. C. BORAIAH (Parliament Secretary to Minister for Agriculture).—

(*a*) Yes.
(*b*) Yes.
(*c*) The matter is under consideration of Government.

ಶ್ರೀ ಜಿ. ಎನ್. ಪಾಟೀರ್.—18ನೇ ತಾರೀಖು 1963ರಲ್ಲಿ ಆರ್ಡರ್ ಹೊರಡಿಸಿ ತುಂಗಭದ್ರಾ ಯೋಜನೆಯಲ್ಲಿ ಕೆಲಸಮಾಡುವವರಿಗೆ ಭತ್ಯ ಕೊಟ್ಟಿದ್ದೀರಿ. ಘಟಪ್ರಭಾ ಮತ್ತು ಭದ್ರಾದಲ್ಲಿರುವವರಿಗೆ ಅದೇ ರೀತಿ ಕೂಡಲಕ್ಕೆ ಯಾವ ಆತಂಕ ತಮಗೆ ಬಂದಿದೆ ?

ಶ್ರೀ ಎಚ್. ಸಿ. ಬೋರಯ್ಯ.—ಅಂತೆಹ ಆತಂಕಗಳೇನೂ ಇದ್ದ ಹಾಗೆ ಕಾಣಲಿಲ್ಲ.

ಶ್ರೀ ಜಿ. ಎನ್. ಪಾಟೀರ್.—ಆತಂಕ ಇದ್ದ ಪಕ್ಷದಲ್ಲಿ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಪರಿಶೀಲನೆ ಮಾಡುತ್ತೇವೆ.

Sri B. M. PATIL.—Are not the criteria taken in to consideration while awarding the project allowance in the T. B. P. Area the same as in the case of the agricultural staff in the Bhadra and the G.L.B.C. areas ?

ಶ್ರೀ ಎಚ್. ಸಿ. ಬೋರಯ್ಯ.—ಹೌದು, ಅದನ್ನೇ ಗಮನದಲ್ಲಿಟ್ಟು ಇದನ್ನೆಲ್ಲಾ ಮಾಡುತ್ತೇವೆ.

ಶ್ರೀಮತಿ ಬಸವರಾಜೇಶ್ವರಿ.—ತುಂಗಭದ್ರಾ ಏರಿಯಾಕ್ಕೆ ಪ್ರಾಜೆಕ್ಟ್ ಅಲೋಯನ್ಸ್ ಕೊಟ್ಟಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ತುಂಗಭದ್ರಾ ಏರಿಯಾಕ್ಕೆ ಮಂಜೂರಾಗಿದೆ.

ಶ್ರೀಮತಿ ಬಸವರಾಜೇಶ್ವರಿ.—ಮಂಜೂರಾಗಿದ್ದರೂ ತಾವು ಕೊಟ್ಟಿಲ್ಲ. ಆ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿ. ಬೋರಯ್ಯ.— ಆ ವಿಷಯ ಆರ್ಡರ್ ಆಗಿಯೂ ಕೂಡ ಜಾರಿಗೆ ಕೊಡದಿದ್ದರೆ ಪರಿಶೀಲನೆ ಮಾಡುತ್ತೇವೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ತುಂಗಭದ್ರಾ ಏರಿಯಾದಲ್ಲಿರತಕ್ಕ ಅಸಿಸ್ಟೆಂಟ್ ಅಗ್ರಿಕರ್ಟರಲ್ ಸಿಬ್ಬಂದಿಗೆ ಸಹಾಯ ಮಾಡಿದ್ದೀರಿ, ಅದೇ ರೀತಿ ಭದ್ರಾ ಮತ್ತು ಘಟಪ್ರಭಾದವರಿಗೂ ಸಹಾಯ ಮಾಡಲು ಏನು ಆತಂಕ ಇದೆ ?

ಶ್ರೀ ಎಚ್. ಸಿ. ಬೋರಯ್ಯ.—ಒಂದು ಸಾರಿ ಪ್ರಪೋಸಲ್ ಸರ್ಕಾರಕ್ಕೆ ಬಂದ ಮೇಲೆ ಅದು ಪ್ರೊಸೆಸ್ ಆಗಿ ಅಂತ್ಯ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ.

Sri B. M. PATIL.—Has it come to the notice of the Government that the resultant inordinate delay will dampen the enthusiasm of the workers under the G.L.B.C. areas ?

ಶ್ರೀ ಎಚ್. ಸಿ. ಬೋರಯ್ಯ.—ಅದಕ್ಕೆ ಉತ್ತರ ಈಗಾಗಲೆ ಹೇಳಿದ್ದೇನೆ, ವಿಷಯ ಸರಕಾರದ ಪರಿಶೀಲನೆಯಲ್ಲಿದೆ, ಜಾಗ್ರತೆ ಫೈಸರಾಗುವ ನಿರೀಕ್ಷೆ ಇದೆ.

ಶ್ರೀಮತಿ ಬಸವರಾಜೇಶ್ವರಿ.—ಮಂಜೂರು ಮಾಡಬೇಕೆಂದು ತಾವು ಬರೆದರೂ ಹಣಕಾಸಿನ ಇರಾಖೆ ಮಂಜೂರುಮಾಡದಿರುವುದು ಗೊತ್ತಿ ?

ಶ್ರೀ ಎಚ್. ಸಿ. ಬೋರಯ್ಯ.—ಇನ್ನೂ ಅದು ಪರಿಶೀಲನೆಯಲ್ಲಿದೆ.

Sri R. M. DESAI.—The Ghataprabha Advisory Committee has recommended that project allowance should be given. What action has been taken to give it to the workers working in the Ghataprabha Left Bank Canal ?

ಶ್ರೀ ಎಚ್. ಸಿ. ಬೋರಯ್ಯ.—ಬೆಳಗಾಮಿನ ಡಿವಿಜಿನಲ್ ಕಮಿಷನರು ಜನವರಿ 66ರಲ್ಲಿ ಬರೆದಿದ್ದಾರೆ, ವಿಷಯ ಪರಿಶೀಲನೆಯಲ್ಲಿದೆ.

Sri R. M. DESAI.—Will it be a favourable decision or will it be just for consideration ?

ಶ್ರೀ ಎಚ್. ಸಿ. ಬೋರಯ್ಯ.—ವಿಷಯ ಪರಿಶೀಲನೆಯಲ್ಲಿದೆ ಎಂದು ಅಷ್ಟು ಮಾತ್ರ ನಾನು ಹೇಳಬಲ್ಲೆ.

ಶ್ರೀ ಜಿ. ಎನ್. ಪಾಟೀರ್.—ಈಗಾಗಲೆ ಎರಡು ವರ್ಷವಾಗಿದೆ, ಇನ್ನೂ ಎಷ್ಟು ವರ್ಷವಾಗ ಬಹುದು ?

ಶ್ರೀ ಎಚ್. ಸಿ. ಬೋರಯ್ಯ.—ತೀವ್ರವಾಗಿಯೇ ಆಗಬಹುದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತೀವ್ರವಾಗಿ ಅಂದರೆ ಎಷ್ಟು ದಿವಸ ಬೇಕು ?

ಶ್ರೀ ಎಚ್. ಸಿ. ಬೋರಯ್ಯ.—ಈಗಾಗಲೆ ಅಂತಿಮ ಘಟ್ಟಕ್ಕೆ ಬಂದಹಾಗೆ ಕಾಣುತ್ತದೆ, ಅದಷ್ಟು ಜಾಗ್ರತೆ ತೀರ್ಮಾನವಾಗಬಹುದು.

ಶ್ರೀ ಎಸ್. ಎಂ. ಗುರೆಡ್ಡಿ.—ಧಡ್ಯಾ ಮತ್ತು ಘಟಪ್ರಭ ಎಡದಂಡೆ ನಾಲೆ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವವರ ವಿಚಾರದಲ್ಲಿ ಒಂದು ಕಡೆ ಭತ್ಯ ಮಂಜೂರು ಮಾಡಿರುವುದು ನಿಜ ಎಂದು ಹೇಳಿದೆ, ಮತ್ತೊಂದು ಕಡೆ ಆ ವಿಷಯ ಪರಿಶೀಲನೆಯಲ್ಲಿದೆ ಎಂದು ತಿಳಿಸಿದೆ. ಇದರಲ್ಲಿ ಯಾವುದು ನಿಜ ?

ಶ್ರೀ ಎಚ್. ಸಿ. ಬೋರಯ್ಯ.—ಅದರೆ ಸಿಬ್ಬಂದಿ ಬೇರೆ ಬೇರೆ ಇದೆ, ಪ್ರಶ್ನೆ ನೋಡಿದರೆ ಸರಿಯಾಗಿ ಗೊತ್ತಾಗುತ್ತದೆ.

SOME HON'BLE MEMBERS.—The Chair may please put Question No. 520.

Mr. SPEAKER.—Yes, I put Question No. 520.

Increasing the D.A. of Low-Paid Government Officials.

*Q.—520. **Sri R. N. LAKSHMIPATHI** (Gauribidanur).—

Will the Government be pleased to state :—

(*a*) whether it is not a fact that the cost of living index has gone up subsequent to the last D.A. increase to the low paid Government officials of the State;

(*b*) whether Government would take steps to further increase their D. A. in view of the rise in the cost of living ?

A.—**Sri RAMAKRISHNA HEGDE** (Minister for Finance).—

(*a*) Yes.

(*b*) The House is already apprised of an increase of Rs. 5 in Dearness Allowance to Government servants drawing basic pay up to Rs. 210 p.m. Government have done their best within the financial resources of the State.

ಶ್ರೀ ಎ. ಕೃಷ್ಣಶೆಟ್ಟಿ.—ಜೀವನಮಟ್ಟದ ಸೂಚ್ಯಂಕಕ್ಕೂ ತುಟ್ಟಿಭತ್ಯ ಕೊಟ್ಟಿರುವುದಕ್ಕೂ ಏನಾದರೂ ಸಂಬಂಧವಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಇದ್ದೇ ಇದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈಗ ಜೀವನ ವೆಚ್ಚ ವಿಶೇಷವಾಗಿ ಹೆಚ್ಚಿರುವುದರಿಂದ ತಾವು ಏರಿಸಿರುವ ತುಟ್ಟಿಭತ್ಯ ಬಹಳ ಕಡಮೆ ಇರುವುದರಿಂದ ಕೇಂದ್ರ ಸರಕಾರ ಕೊಟ್ಟಿರುವಂತೆ ಇಲ್ಲೂ ಹೆಚ್ಚಿನ ತುಟ್ಟಿಭತ್ಯವನ್ನು ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಶಕ್ತಿ ನೋಡಿ ನಾವು ಕೆಲಸಮಾಡಬೇಕಾಗಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ಜೀವನವೆಚ್ಚ 1960ರಿಂದ ಇಲ್ಲಿಯವರೆಗೆ 300 ಪಾಯಿಂಟ್ ಹೆಚ್ಚಿದೆ. ಹಾಗಿರುವಾಗ ಈ ಮಷ್ ತುಟ್ಟಿಭತ್ಯ ಎಷ್ಟು ಹೆಚ್ಚಿಸರಾಗಿದೆ ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಉತ್ತರದಲ್ಲಿ ಕೊಡರಾಗಿದೆ.

Sri K. S. SURYANARAYANA RAO.—How much does the five-rupees increase in D.A. work out in terms of the cost of living index taking 1960 as the base year ?

Mr. SPEAKER.—It is open to any member to work it out.